# Government of Karnataka

## Deposition Sheet (R.P.N.57) Form 4 Criminal

### ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 211/2020 |

ದಿನಾಂಕ 02-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 1 ಪ್ರಾಸಾಃ 1

| | |
|---|---|
| ಹೆಸರು | ತುಳಜಪ್ಪ |
| ತಂದೆಯ ಹೆಸರು | ರಂಗಪ್ಪ |
| ವಯಸ್ಸು | 65 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಗೌತಮ ಓಣಿ ತಾ ದೇವದುರ್ಗ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-2 ನನ್ನ ಮಗ. ಚಾಸಾ-3 ರಿಂದ 5 ರವರು ನನಗೆ ಗೊತ್ತಿರುತ್ತಾರೆ. ದೇವದುರ್ಗ ಸೀಮಾಂತರದ ಹೊಲದ ಸ ನಂ 26 ರಲ್ಲಿ 03 ಗುಂಟೆ ಜಮೀನು ರೂ 2 ಲಕ್ಷ 60 ಸಾವಿರ ರೂಪಾಯಿಗೆ ಖರೀದಿಸಿರುತ್ತೇನೆ. ಅಂದಾಜು 4-5 ವರ್ಷಗಳ ಹಿಂದೆ ನಾನು ನನ್ನ ಮಗ ಚಾಸಾ-2 ಸರ್ವೆಯರಾದ ಚಾಸಾ-3 ಮತ್ತು 4 ಅಳತೆ ಮಾಡಲು ಮಧ್ಯಾಹ್ನ ಹೋಗಿದ್ದಾಗ, 5 ಜನ ಆರೋಪಿತರು ಅಲ್ಲಿಗೆ ಬಂದು, ಲೇ ಮಗನೆ ನೀನು ಇಲ್ಲಿಗೆ ಹೇಗೆ ಬಂದೆ ಎಂದು ಕೊಂಡಪ್ಪ, ಬಸವರಾಜ ಮತ್ತು ಚನ್ನಬಸವ ಇನ್ನೂ ಇಬ್ಬರು ಆರೋಪಿತರ ಹೆಸರು ನನಗೆ ನೆನಪಿಲ್ಲ, ಇವರೆಲ್ಲರೂ ಸೇರಿಕೊಂಡು, ಕೈಯಿಂದ ನನ್ನ ಮಗ ಚಾಸಾ-2 ರವರ ಮೈಕೈಗೆ ಬಾಯಿಗೆ ಹೊಡೆದರು, ಮತ್ತು ನನಗೆ ಆರೋಪಿತರು ಕೈಯಿಂದ ಹೊಡೆದಿರುತ್ತಾರೆ. ನಂತರ ನೀನು ಇನ್ನೊಂದು ಸಲ ಇಲ್ಲಿಗೆ ಬಂದರೆ ನಿನಗೆ ಬಿಡುವುದಿಲ್ಲ

ಎಂದು ಜೀವದ ಬೆದರಿಕೆ ಹಾಕಿರುತ್ತಾರೆ. ನಂತರ ನಾನು ಪೋಲಿಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿರುತ್ತೇನೆ. ಸಾಕ್ಷಿ ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿ ಪಿ 1 ಎಂದು ಸಾಕ್ಷಿದಾರರ ಸಹಿಯನ್ನು ನಿ ಪಿ 1 (ಎ) ಎಂದು ಗುರುತಿಸಲಾಯಿತು. ಮರು ದಿನ ಪೋಲಿಸರು ಬಂದು ಪಂಚನಾಮೆ ಮಾಡಿಕೊಂಡು ಹೋಗಿರುತ್ತಾರೆ. ಸಾಕ್ಷಿದಾರರು ಪಂಚನಾಮೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿ ಪಿ 2 ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಬೆಳಿಗ್ಗೆ 9-30 ರಿಂದ 10-30 ಗಂಟೆಯವರೆಗೆ ನಾನು ತೋರಿಸಿದ ಸ್ಥಳದಲ್ಲಿ ಮಾಡಿರುತ್ತಾರೆ. ಆರೋಪಿತರು ಗೈರು ಹಾಜರು ಇದ್ದು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ ಎಸ್ ಎಮ್ ಆರ್ ವಕೀಲರಿಂದ :-**

1. ಕೊಂಡಪ್ಪ ತಂದೆ ಮರಿಯಪ್ಪ ಮತ್ತು ನೀವು ಅಣ್ಣ ತಮ್ಮಂದಿರಾಗಿದ್ದೀರಿ ಎಂದರೆ ಸಾಕ್ಷಿಯು 2ನೇ ಅಣ್ಣ ತಮ್ಮಂದಿರಾಗಿದ್ದೇವೆ ಎನ್ನುತ್ತಾರೆ. ಆರೋಪಿ ಕೊಂಡಪ್ಪ ನ ತಂಗಿಯ ಗಂಡನಾಗಿರುತ್ತಾನೆ. ನಿಮ್ಮ ತಾತನ ಕಡೆಯಿಂದ ಹಿರಿಯರ ಆಸ್ತಿಗಳು ನಿಮಗೆ ಭಾಗವಾಗಿ ಬಂದಿರುತ್ತವೆ ಎಂದರೆ ಸಾಕ್ಷಿಯು ನಮ್ಮ ತಂದೆ ಇರುವಾಗಲೇ ನಮ್ಮಗೆ ಆಸ್ತಿಯಲ್ಲಿ ಭಾಗ ಬಂದಿರುತ್ತವೆ. ಕೆಲವು ಆಸ್ತಿಗಳಲ್ಲಿ ಭಾಗ ಸರಿಯಾಗಿ ಆಗಿಲ್ಲ ಎಂದು ದಾವೆ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ನಾನು ಸಲ್ಲಿಸಿಲ್ಲ ಕೊಂಡಪ್ಪ ಸಲ್ಲಿಸಿದ್ದಾನೆ ಎನ್ನುತ್ತಾರೆ. ನಿಮಗೂ ಮತ್ತು ಆರೋಪಿತರಿಗೂ ವೈಮನಸ್ಸು ಇದ್ದು ಒಬ್ಬರಿಗೊಬ್ಬರು ಮಾತನಾಡುವುದಿಲ್ಲ ಎಂದರೆ ಸರಿ.

2. ದೂರನ್ನು ನಾನು ಮೌಖಿಕವಾಗಿ ಪೋಲಿಸರಿಗೆ ತಿಳಿಸಿರುತ್ತೇನೆ ಅವರು ಬರೆದುಕೊಂಡಿರುತ್ತಾರೆ. ಪೋಲಿಸ್ ಠಾಣೆಗೆ ಹೋಗಿದ್ದಾಗ, ಮಧ್ಯಾಹ್ನ 12-00 ಗಂಟೆ ಸಮಯ ಆಗಿತ್ತು. ಘಟನೆಯಾದ ಮರುದಿನ ದೂರನ್ನು ಪಡೆದುಕೊಂಡಿರುತ್ತಾರೆ. ದೂರು ನೀಡಿದ ನಂತರ ಮತ್ತೆ ಪೋಲಿಸ್ ಠಾಣೆಗೆ

ಹೋಗಿರುವುದಿಲ್ಲ. ಘಟನೆಯಲ್ಲಿ ನನಗೆ ಆದ ಗಾಯಗಳ ಬಗ್ಗೆ ಸರಕಾರಿ ಆಸ್ಪತ್ರೆ ದೇವದುರ್ಗದಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಘಟನೆಯಲ್ಲಿ ನನ್ನ ಮೂಗಿನಲ್ಲಿ ಮತ್ತು ಬಾಯಿಯಲ್ಲಿ ರಕ್ತ ಬಂದಿತ್ತು ಮತ್ತು ಎದೆಗೆ ಪೆಟ್ಟಾಗಿತ್ತು, ಇಷ್ಟು ಬಿಟ್ಟು ಬೇರೆ ಕಡೆ ಗಾಯಗಳು ಆಗಿರುವುದಿಲ್ಲ. ಶಾಂತಪ್ಪ ಎಂಬುವವರು ನಿಮ್ಮ ಮಗನಾಗಿದ್ದು ಅವರು ಸರ್ವೆಯರ್ ಆಗಿದ್ದಾರೆ ಎಂದರೆ ಸರಿ. ಚಾಸಾ-3 ಸರ್ವೆಯರ್ ನಿಮ್ಮ ಸಂಬಂಧಿಕರು ಎಂದರೆ ಸಾಕ್ಷಿಯು ಸಂಬಂಧಿಕರು ಅಲ್ಲ ಅವರು ನಮ್ಮ ಜಾತಿಯವರು ಎನ್ನುತ್ತಾರೆ. ಚಾಸಾ-2 ಮತ್ತು 3 ಒಂದೇ ಇಲಾಖೆಯಲ್ಲಿ ಜೊತೆಯಾಗಿ ಕೆಲಸ ಮಾಡುತ್ತಾರೆ ಎಂದರೆ ಸರಿ.

3. ನಾನು ಖರೀದಿ ಮಾಡಿದ ಜಮೀನು ಸ ನಂ 26 ಇದ್ದು ಹಿಸ್ಸಾ ನಂಬರ್ ನನಗೆ ಗೊತ್ತಿಲ್ಲ. ಸ ನಂ 26 ಇದರ ಒಟ್ಟು ವಿಸ್ತೀರ್ಣ ಮತ್ತು ಯಾರು ಯಾರು ಪಟ್ಟೇದಾರರು ಇದ್ದಾರೆಂದು ನನಗೆ ಗೊತ್ತಿಲ್ಲ. ಖರೀದಿ ಮಾಡಿದ ದಾಖಲೆಗಳನ್ನು ಪೋಲಿಸರಿಗೆ ಕೊಟ್ಟಿಲ್ಲ. ಸರ್ವೆ ಅರ್ಜಿಯನ್ನು ಪೋಲಿಸರಿಗೆ ಕೊಟ್ಟಿಲ್ಲ. ನಿಮಗೂ ಮತ್ತು ಆರೋಪಿತರಿಗೂ ಹಳೆ ದ್ವೇಷ ಇರುವುದರಿಂದ ಅವರಿಗೆ ತೊಂದರೆ ಕೊಡಲು ಸುಳ್ಳು ದೂರು ಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ಘಟನೆಯಾದ ದಿನ 12-40 ಗಂಟೆಗೆ ಪೋಲಿಸ್ ಠಾಣೆಗೆ ಹೋಗಿ ದೂರು ಕೊಟ್ಟಿದ್ದೇನೆ ಮತ್ತು ಮರು ದಿನ ಪೋಲಿಸರು ನನ್ನ ದೂರು ಸ್ವೀಕರಿಸಿದರು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಘಟನೆಯಲ್ಲಿ ನಿಮ್ಮ ಮೂಗಿನಲ್ಲಿ ಮತ್ತು ಬಾಯಲ್ಲಿ ರಕ್ತ ಬಂತು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೀರಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಘಟನೆ ನಡೆಯದಿದ್ದರೂ ಆರೋಪಿತರಿಗೆ ತೊಂದರೆ ಕೊಡಬೇಕೆಂದು ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ, ಯಾವುದೇ ಘಟನೆಯಾಗಿಲ್ಲ, ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-
ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ